ದಿಃ 17.10.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆಃ ಶ್ರೀ ವಿ.ಹೆಚ್.ಹೆಚ್ ವಕೀಲರಿಂದ ಅರ್ಜಿದಾರರ ಪರವಾಗಿ**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ಎಂ.ಎಲ್.ಸಿ ರಿಜಿಸ್ಟರ್ ನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, Admission record ನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು ಗುರುತಿಸಲಾಯಿತು, Discharge summary ನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು ಗುರುತಿಸಲಾಯಿತು, ದಿಃ 22.04.2021 ರಂದು ಎದುರುದಾರರಿಗೆ ನೀಡಿದ ನೋಟೀಸಿನ ಪ್ರತಿಯನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು ಗುರುತಿಸಲಾಯಿತು, ದಿಃ 13.05.2021 ರಂದು 4 ನೇ ಎದುರುದಾರರು ನೀಡಿರುವ ಪ್ರತ್ಯುತ್ತರವನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು ಗುರುತಿಸಲಾಯಿತು, Emergency department triage notes 3 nos ನಿ.ಪಿ.6 ಎಂದು ಗುರುತಿಸಲಾಯಿತು, Ddoctors daily progress notes in 12 nos ನಿ.ಪಿ.7 ಎಂದು ಗುರುತಿಸಲಾಯಿತು, Referral forms 3 nos ನಿ.ಪಿ.8 ಎಂದು ಗುರುತಿಸಲಾಯಿತು, Biological reference interval 6 nos ನಿ.ಪಿ.9 ಎಂದು ಗುರುತಿಸಲಾಯಿತು, Chest radiograph A.P view 1 nos ನಿ.ಪಿ.10 ಎಂದು ಗುರುತಿಸಲಾಯಿತು, Investigations data sheets 3 nos ನಿ.ಪಿ.11 ಎಂದು ಗುರುತಿಸಲಾಯಿತು, Patient information literature for HIV Testing 1 nos ನಿ.ಪಿ.12 ಎಂದು ಗುರುತಿಸಲಾಯಿತು, Informed consent for transfusions of blook products 3 nos ನಿ.ಪಿ.13 ಎಂದು ಗುರುತಿಸಲಾಯಿತು, T.P.R graphic chart for blood transfusion 1 nos ನಿ.ಪಿ.14 ಎಂದು ಗುರುತಿಸಲಾಯಿತು, Informed consent for invasive, diagnostic, medical and surgical procedure with moderate sedation ನಿ.ಪಿ.15 ಎಂದು

ಗುರುತಿಸಲಾಯಿತು, ICU consent form 2 nos ನಿ.ಪಿ.16 ಎಂದು ಗುರುತಿಸಲಾಯಿತು, Informed consent for surgical operation 2 nos ನಿ.ಪಿ.17 ಎಂದು ಗುರುತಿಸಲಾಯಿತು, Informed consent for administration of Anaesthesia 1 nos ನಿ.ಪಿ.18 ಎಂದು ಗುರುತಿಸಲಾಯಿತು, OT check list 1 nos ನಿ.ಪಿ.19 ಎಂದು ಗುರುತಿಸಲಾಯಿತು, Operation notes 1 nos ನಿ.ಪಿ.20 ಎಂದು ಗುರುತಿಸಲಾಯಿತು, Information consent for surgical operation 4 nos ನಿ.ಪಿ.21 ಎಂದು ಗುರುತಿಸಲಾಯಿತು, O.T check sheet list 2 nos 06.10.2020 ನಿ.ಪಿ.22 ಎಂದು ಗುರುತಿಸಲಾಯಿತು, Operation notes 1 nos ನಿ.ಪಿ.23 ಎಂದು ಗುರುತಿಸಲಾಯಿತು, Informed surgical operation 3 nos ನಿ.ಪಿ.24 ಎಂದು ಗುರುತಿಸಲಾಯಿತು, O.T check sheet list 2 nos 12.10.2020 ನಿ.ಪಿ.25 ಎಂದು ಗುರುತಿಸಲಾಯಿತು, O.T notes 1 notes ನಿ.ಪಿ.26 ಎಂದು ಗುರುತಿಸಲಾಯಿತು, Admission form 1 nos ನಿ.ಪಿ.27 ಎಂದು ಗುರುತಿಸಲಾಯಿತು, Planning sheet ನಿ.ಪಿ.28 ಎಂದು ಗುರುತಿಸಲಾಯಿತು, Photo ನಿ.ಪಿ.29 ಎಂದು ಗುರುತಿಸಲಾಯಿತು, Disability Certificate ನಿ.ಪಿ.30 ಎಂದು ಗುರುತಿಸಲಾಯಿತು ಮತ್ತು ಆಧಾರ್ ಕಾರ್ಡ್ ನಿ.ಪಿ.31 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಕೆ.ಎಂ.ಪಿ ವಕೀಲರಿಂದ ಎದುರುದಾರರ ಪರವಾಗಿ**

3. ಪಾಟೀ ಸವಾಲು ಮಾಡಲು ಸಮಯ ಕೇಳಿದ್ದು, ಸಮಯ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ
ಮಾ

ದಿಃ 12.12.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲು ಶ್ರೀ ಕೆ.ಎಂ.ಪಿ ವಕೀಲರಿಂದ ಎದುರುದಾರರ ಪರವಾಗಿ**

4. ನಾನು 10 ನೇ ತರಗತಿ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ವಿದ್ಯುತ್ ಕೆಲಸ ನಿರ್ವಾಹಣೆ ಮಾಡುವ ಬಗ್ಗೆ ನಾನು ಯಾವುದೇ ತರಬೇತಿ ಪಡೆದಿರುವುದಿಲ್ಲ. ನಾನು ಹೊರ ಗುತ್ತಿಗೆ ಆಧಾರದ ಮೇಲೆ ಕಿಯೋನಿಕ್ಸ್ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದೆನು ಎಂದರೆ ಸಾಕ್ಷಿ ಏಜೆನ್ಸಿಯ ಹೆಸರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಮೆಸ್ಕಾಂ ನ ಕಾಯಂ ನೌಕರ ಅಲ್ಲ ಎಂದರೆ ಸರಿ. ನನ್ನನ್ನು ಮೆಸ್ಕಾಂ ಗೆ ಹೊರಗುತ್ತಿಗೆ ಆಧಾರದಲ್ಲಿ ಏಜೆನ್ಸಿಯವರು ನೇಮಕ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೆಸ್ಕಾಂನಲ್ಲಿ ನನ್ನನ್ನು ನೇಮಕಾತಿ ಮಾಡಿದ ಬಗ್ಗೆ ನನಗೆ ಯಾವುದೇ ನೇಮಕಾತಿ ಆದೇಶ ನೀಡಿರುವುದಿಲ್ಲ. ನನ್ನನ್ನು Mansoon Special Task Force ಗೆ ನೇಮಕ ಮಾಡಿಕೊಂಡಿರುತ್ತಾರೆ ಎಂದರೆ ಸರಿ. 2011-12 ರಿಂದ 2021 ರವರೆಗೆ ನಾನು ಸದರಿ ಕೆಲಸವನ್ನು ಮಾಡಿರುತ್ತೇನೆ. Mansoon Special Task Force ನಲ್ಲಿ Mansoon ಅವಧಿಯಲ್ಲಿ ಮಾತ್ರ ಕೆಲಸ ನಿರ್ವಹಿಸಲು ಅವಧಿ ಇರುತ್ತದೆ ಎಂದರೆ ಸಾಕ್ಷಿಯು Mansoon ಅವಧಿ ಇಲ್ಲದ ಸಮಯದಲ್ಲಿಯು ಕೆಲಸ ಇರುತ್ತವೆ ಎಂದು ನುಡಿಯುತ್ತಾರೆ. Mansoon Special Task Force ನ ಯಾವುದೇ ಜವಾಬ್ದಾರಿಯು ಮೆಸ್ಕಾಂ ಅಧಿಕಾರಿಗಳಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಮೆಸ್ಕಾಂ ನವರು Mansoon Special Task Force ನಲ್ಲಿ ಕೆಲಸ ಮಾಡುವವರಿಗೆ ಯಾವತ್ತೂ ಸಂಬಳ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಅಪಘಾತವು ಆಗುವ ಸಮಯದಲ್ಲಿ ಮಂಜುನಾಥ ಲೈನ್ ಮ್ಯಾನ್ ರವರ ಕೈ ಕೆಳಗೆ ಕೆಲಸ ಮಾಡುತ್ತಿದ್ದೆನು. ಮೆಸ್ಕಾಂ ನಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂಧಿಗಳಿಗೆ ಕರ್ತವ್ಯ ರಿಜಿಸ್ಟರ್ ಇರುತ್ತದೆ ಎಂದರೆ ಸರಿ.

ದಾರದಹಳ್ಳಿ ಮೆಸ್ಕಾಂ ನಲ್ಲಿ ವಿರೇಶ್ ದಳವಾಯಿ ರವರು ಜುನಿಯರ್ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ದಾರದಹಳ್ಳಿ ಮೆಸ್ಕಾಂ ನಲ್ಲಿ ಅಪಘಾತವಾದ ದಿನ ಯಾರು ಯಾರು ಯಾವ ಯಾವ ಕೆಲಸವನ್ನು ನಿರ್ವಹಿಸಿರುತ್ತಾರೆ ಎನ್ನುವ ಬಗ್ಗೆ ರಿಜಿಸ್ಟರ್ ನ್ನು ನಾನು ನೋಡಿರುವುದಿಲ್ಲ. ದಾರದಹಳ್ಳಿ ಮೆಸ್ಕಾಂ ನಲ್ಲಿ ಕರ್ತವ್ಯ ನಿರ್ವಹಿಸಿದ ಸಿಬ್ಬಂಧಿಗಳ ಮಾಹಿತಿಯನ್ನು ನಾನು ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ.

5. ದಿಃ 28.09.2020 ರಂದು ಲೈನ್ ಮ್ಯಾನ್ ಮಂಜುನಾಥ ರವರಿಗೆ ಮೀಟರ್ ಸರಿಪಡಿಸುವ ಕೆಲಸಕ್ಕೆ ನೇಮಕ ಮಾಡಲಾಗಿತ್ತು ಎಂದರೆ ಸರಿಯಲ್ಲ. ದಿಃ 28.09.2020 ರಂದು ಲೈನ್ ಮಂಜುನಾಥ ರವರನ್ನು ಮೀಟರ್ ಸರಿಪಡಿಸುವ ಕೆಲಸಕ್ಕೆ ನೇಮಕ ಮಾಡಿದ್ದು ಅವರ ಸಹಾಯಕರಾಗಿ ಕೆಲಸ ಮಾಡಲು Mansoon Special Task Force ನ ಸಿಬ್ಬಂಧಿಗಳನ್ನು ಅವರ ಜೊತೆ ಕೆಲಸ ನಿರ್ವಹಿಸಲು ಕಳುಹಿಸಿದ್ದರು ಎಂದರೆ ಸರಿಯಲ್ಲ. ಮಂಜುನಾಥ ರವರನ್ನು ಮೀಟರ್ ಸರಿಪಡಿಸುವ ಕೆಲಸಕ್ಕೆ ನೇಮಕ ಮಾಡಿದ್ದರು ಸಹ ಈ ಪ್ರಕರಣದಲ್ಲಿ ನನಗೆ ತೊಂದರೆಯಾಗುತ್ತದೆ ಎನ್ನುವ ಉದ್ದೇಶದಿಂದ ಸದರಿ ದಾಖಲೆಯನ್ನು ನಾನು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. Mansoon Special Task Force ನ ಸಿಬ್ಬಂಧಿಗಳನ್ನು ಯಾವುದೇ ಕಾರಣಕ್ಕೆ ವಿದ್ಯುತ್ ಕಂಬಗಳಿಗೆ ಹತ್ತಲು ಮತ್ತು ವಿದ್ಯುತೀಕರಣಗೊಳಿಸಲು ಯಾವತ್ತೂ ನೇಮಕ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಲೈನ್ ಮ್ಯಾನ್ ಗಳು ನಮ್ಮನ್ನೇ ವಿದ್ಯುತ್ ಕಂಬಕ್ಕೆ ಹತ್ತಿಸುತ್ತಿದ್ದರು ಎಂದರೆ ನುಡಿಯುತ್ತಾರೆ. ಲೈನ್ ಮ್ಯಾನ್ ಗಳು ನಮ್ಮನ್ನು ವಿದ್ಯುತ್ ಕಂಬಗಳಿಗೆ ಹತ್ತಿಸುವುದನ್ನು ನಾನು ಮೇಲಾಧಿಕಾರಿಗಳಿಗೆ ದೂರನ್ನು ನೀಡಿರುವುದಿಲ್ಲ. ದಿಃ 05.11.2020 ರಂದು ಮೆಸ್ಕಾಂ ಅಧಿಕಾರಿಗಳ ಮುಂದೆ

ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. Transformer ಗಳಲ್ಲಿ ಜಿ.ಓ.ಎಸ್. ಎನ್ನುವ ಉಪಕರಣ ಇರುತ್ತದೆ ಎಂದರೆ ಸರಿ. ಸದರಿ ಜಿ.ಓ.ಎಸ್ ಗಳಲ್ಲಿ ಒಟ್ಟು 3 ಬ್ಲೇಡ್ ಗಳು ಇರುತ್ತವೆ. ಸದರಿ ಜಿ.ಓ.ಎಸ್ ನಲ್ಲಿ ಒಂದು ಬ್ಲೇಡ್ ಒಪನ್ ಆಗದೆ ಉಳಿದರು ಸಹ ವಿದ್ಯುತ್ ತಂತಿಯಲ್ಲಿ ವಿದ್ಯುತ್ ಸರಬರಾಜು ಆಗುತ್ತದೆ ಎಂದರೆ ಸರಿ. ಯಾವುದೇ ವಿದ್ಯುತ್ ತಂತಿಯ ಕೆಲಸ ನಿರ್ವಹಿಸುವ ಸಮಯದಲ್ಲಿ ಜಿ.ಓ.ಎಸ್ ನ್ನು ಒಪನ್ ಮಾಡುವ ಸಮಯದಲ್ಲಿ ಸದರಿ ಲೈನ್ ನ ಮುಕ್ತತೆಯನ್ನು ಸಂಬಂಧಪಟ್ಟ ಅಧಿಕಾರಿಯಿಂದ ಪಡೆಯಬೇಕಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ವಿಚಾರವು ಸಂಬಂಧಪಟ್ಟ ಲೈನ್ ಮ್ಯಾನ್ ಗಳಿಗೆ ಬಿಟ್ಟಿರುವ ವಿಚಾರ ಇರುತ್ತದೆ.

6. ದಿಃ 28.09.2020 ರಂದು ನಾನು ಬಕ್ಕಿ ಗ್ರಾಮದ ಅಶೋಕ್ ರವರ ತೋಟದಲ್ಲಿ ಲೈನ್ ಸರಿ ಮಾಡಲು ಹೋಗಿರುತ್ತೇವೆ ಎಂದರೆ ಸರಿ. ಸದರಿ ಅಶೋಕ್ ರವರು ವಿದ್ಯುತ್ ಲೈನ್ ಸರಿ ಇರುವುದಿಲ್ಲ ಎಂದು ನನಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ 05.11.2020 ರಂದು ನೀಡಿದ ಹೇಳಿಕೆಯಲ್ಲಿ ನನಗೆ ಅಶೋಕ್ ರವರು ಸಿಂಗಲ್ ಪೇಸ್ ಆಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಜಿ.ಓ.ಎಸ್ ನಲ್ಲಿ ಇರುವ 3 ಬ್ಲೇಡ್ ಗಳು ಒಪನ್ ಆಗಿರುತ್ತದೋ ಇಲ್ಲವೋ ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ. ಲೈನ್ ಮ್ಯಾನ್ ಮಂಜುನಾಥ ರವರು ಆ ದಿನ ವಿದ್ಯುತ್ ಕಂಬವನ್ನು ಹತ್ತಿರುವುದಿಲ್ಲ ಸದರಿ ಮಂಜುನಾಥ ರವರೇ ಕಂಬ ಹತ್ತುವಂತೆ ನನಗೆ ಸೂಚಿಸಿರುತ್ತಾರೆ. ಮಂಜುನಾಥ ರವರು ಸದರಿ ದಿನ ಘಟನಾ ಸ್ಥಳದಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಅಶೋಕ್ ರವರ ಮಾತನ್ನು ಕೇಳಿಕೊಂಡು ನಾನೇ ವಿದ್ಯುತ್ ತಂತಿ ಸರಿಪಡಿಸಲು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಲೈನ್ ಮ್ಯಾನ್ ಮಂಜುನಾಥ ರವರು ಸ್ಥಳಕ್ಕೆ ಬರುವ ಪೂರ್ವದಲ್ಲಿಯೇ ನಾನೇ

ವಿದ್ಯುತ್ ತಂತಿಯನ್ನು ಸರಿಪಡಿಸಲು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನನಗೆ ವಿದ್ಯುತ್ ನಿರ್ವಾಹಣೆ ಬಗ್ಗೆ ಸರಿಯಾದ ಮಾಹಿತಿ ಇರದೆ ನಾನೇ ಕಂಬ ಹತ್ತಿದ ಕಾರಣ ಸದರಿ ಅವಘಡವು ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅವಘಡವು ಯಾಂತ್ರಿಕ ತಪ್ಪಿನಿಂದ ಆಗಿರುತ್ತದೆ ಎಂದು ನಾನು ದಿಃ 05.11.2020 ರ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಆಸ್ಪತ್ರೆಯಲ್ಲಿ ಅನೇಕ ದಾಖಲೆಗಳಿಗೆ ನನ್ನ ಸಹಿಯನ್ನು ಬೇರೆ ಬೇರೆ ಅಧಿಕಾರಿಗಳು ಪಡೆದಿರುತ್ತಾರೆ ಸದರಿ ಸಹಿಗಳು ಯಾವುದಕ್ಕೆ ಸಂಬಂಧಪಟ್ಟಿರುತ್ತದೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 30.01.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಂದುವರೆದ ಪಾಟೀ ಸವಾಲು ಶ್ರೀ ಕೆ.ಎಂ.ಪಿ ವಕೀಲರಿಂದ ಎದುರುದಾರರ ಪರವಾಗಿ**

7. ನಾನು keonics ಕಂಪನಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ನೇಮಕ ಆಗಿರುವ ಉದ್ಯೋಗಿ ಎಂದರೆ ಸರಿಯಲ್ಲ. ಮೆಸ್ಕಾಂನಿಂದ ಸಂಬಳ ಪಡೆದ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರು ಮಾಡಿರುವುದಿಲ್ಲ. ದಿಃ 28.09.2020 ರಂದು ವಿದ್ಯುತ್ ಅವಗಡ ಆದ ಬಗ್ಗೆ ನಾನಾಗಲಿ ನನ್ನ ಕಡೆಯವರಾಗಲಿ ಯಾವುದೇ ದೂರನ್ನು ಪೊಲೀಸರಿಗೆ ನೀಡಿರುವುದಿಲ್ಲ. ವಿದ್ಯತ್ ಅವಗಡ ಆದ ಸಂದರ್ಭದಲ್ಲಿ ವಿದ್ಯುತ್ ಇನ್ಸಪೆಕ್ಟರ್ ಸದರಿ ಅವಗಡದ ಬಗ್ಗೆ ತನಿಖೆ ಮಾಡುತ್ತಾರೆ ಎಂದರೆ ಸರಿ ಸದರಿ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿ. ನಾನು ವಿದ್ಯುತ್ ಪರಿವೀಕ್ಷಕರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ದಿಃ 05.11.2020 ರಂದು ನಾನು ವಿದ್ಯುತ್ ಪರಿವೀಕ್ಷಕರಿಗೆ ಹೇಳಿಕೆಯನ್ನು ನೀಡಿದ್ದರು ಸಹ ಸದರಿ ಹೇಳಿಕೆಯನ್ನು ಒಪ್ಪಿಕೊಂಡರೆ ಈ ಪ್ರಕರಣದಲ್ಲಿ ತೊಂದರೆಯಾಗುತ್ತದೆ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾಂತ್ರಿಕ ದೋಷದಿಂದ ಸದರಿ ವಿದ್ಯುತ್ ಅವಗಡವು ಸಂಭವಿಸಿರುತ್ತದೆ ಎಂದು ನಾನು ದಿಃ 05.11.2020 ರಂದು ವಿದ್ಯುತ್ ಪರಿವೀಕ್ಷಕರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಗೆ ನಾನು ಸಹಿ ಹಾಕಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಬಳಿ ಯಾವುದೇ ಸಹಿಯನ್ನು ಪಡೆದಿರುವುದಿಲ್ಲ ಆಸ್ಪತ್ರೆಯಲ್ಲಿ ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ವಿದ್ಯುತ್ ಪರಿವೀಕ್ಷಕರಿಗೆ ನಾನು ನೀಡಿರುವ ಹೇಳಿಕೆಗೆ ಸಹಿ ಮಾಡಿದ್ದರು ಸಹ ಆಸ್ಪತ್ರೆಯಲ್ಲಿ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ವಿದ್ಯುತ್

ಪರಿವೀಕ್ಷಕರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ವಿದ್ಯುತ್ ಅವಗಡ ಆದ ಸಂದರ್ಭದಲ್ಲಿ ದಾರದಳ್ಳಿ ಮಾರ್ಗದ section officer ಆಗಿ ವಿರೇಶ್ ದಳವಾಯಿ ರವರು ಕರ್ತವ್ಯ ನಿರ್ವಹಿಸುತ್ತಿದ್ದರು. ಬಕ್ಕಿ ಅಶೋಕ್ ರವರ ತೋಟದಲ್ಲಿ ವಿದ್ಯುತ್ ಲೈನ್ ಸರಿಪಡಿಸುವ ಕೆಲಸಕ್ಕೆ ಹೋಗುವ ಸಮಯದಲ್ಲಿ ದಾರದಹಳ್ಳಿ section officer ಗೆ ನಾನು ವಿಚಾರ ತಿಳಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಜೊತೆ ಇದ್ದ ಲೈನ್ ಮ್ಯಾನ್ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಜೊತೆಗೆ ಇದ್ದ ಲೈನ್ ಮ್ಯಾನ್ ಎಷ್ಟು ಗಂಟೆಗೆ section officer ಗೆ ತಿಳಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಬೇಜವಾಬ್ದಾರಿತನದಿಂದ ಮತ್ತು ನಿರ್ಲಕ್ಷ್ಯತನದಿಂದ ಸದರಿ ವಿದ್ಯುತ್ ಅಪಘಾತವು ನಡೆದಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿದ್ಯುತ್ ಅಪಘಾತಕ್ಕೆ ನಾನೇ ನೇರ ಕಾರಣ ಆಗಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ಎದುರುದಾರರು ಯಾವುದೇ ಪರಿಹಾರವನ್ನು ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ರೀತಿಯ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

8. ದಿಃ 30.01.2021 ರಂದು ನಾನು Employees State Insurance Corporation ಗೆ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಚಿಕ್ಕಮಗಳೂರಿನ ESI ಕಚೇರಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ESI ನಲ್ಲಿ ಅರ್ಜಿ ಸಲ್ಲಿಸಿದ ಬಗ್ಗೆ ಪರಿಹಾರ ಬಂದಿದೆಯೋ ಇಲ್ಲವೋ ಎಂದು ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿರುವುದಿಲ್ಲ. ನಾನು ವೈದ್ಯರ ಜೊತೆ ಶಾಮೀಲ್ ಆಗಿ ನನ್ನ ದೈಯಿಕ ನ್ಯೂನತೆಯ ಬಗ್ಗೆ ದಾಖಲೆಯನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಎದುರುದಾರರಿಂದ ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲದಿದ್ದರು ಸಹ ಸುಳ್ಳು ದಾಖಲೆಯನ್ನು ಸೃಷ್ಟಿ

ಮಾಡಿ ಪರಿಹಾರ ಕೋರುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ದಿನ ಮಂಜುನಾಥ ಲೈನ್ ಮ್ಯಾನ್ ಗೆ ಸಹಾಯಕನಾಗಿ ಹೋಗಿದ್ದೆನು ಎಂದರೆ ಸರಿ. ನಾನು ಆ ದಿನ ಯಾವುದೇ ಮೀಟರ್ ನ್ನು ಸರಿಪಡಿಸಲು ಹೋಗಿರಲಿಲ್ಲ. ಮಂಜುನಾಥ ರವರನ್ನು ವಿದ್ಯುತ್ ಮೀಟರ್ ಗಳನ್ನು ಸರಿಪಡಿಸುವ ಉದ್ದೇಶಕ್ಕಾಗಿ ಆ ದಿನ ಅವರನ್ನು ನೇಮಕ ಮಾಡಿತ್ತು ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ಪರಿಹಾರವನ್ನು ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ಈ ಪ್ರಕರಣವನ್ನು ದಾಖಲು ಮಾಡುವ ಪೂರ್ವದಲ್ಲಿ ನಾನು ನನ್ನ ವಕೀಲರ ಮೂಲಕ ಎದುರುದಾರರಿಗೆ ನೋಟೀಸು ನೀಡಿರುತ್ತೇನೆ ಎಂದರೆ ಸರಿ. ಸದರಿ ನೋಟೀಸಿಗೆ ಎದುರುದಾರರು ಪ್ರತ್ಯುತ್ತರವನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ನೀಡಿರುವ ನೋಟೀಸಿಗೆ ಎದುರುದಾರರು ಉತ್ತರ ನೀಡಿರುತ್ತಾರೋ ಇಲ್ಲವೋ ಎಂದು ನಾನು ವಿಚಾರಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ಮಧ್ಯಂತರ ಆದೇಶದ ಮೇರೆಗೆ ದಿಃ 07.08.2023 ರಂದು ಸಾಕ್ಷಿಗೆ ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲು ಶ್ರೀ ಕೆ.ಎಂ.ಪಿ ವಕೀಲರಿಂದ ಎದುರುದಾರರ ಪರವಾಗಿ**

10. ಈಗ ನನಗೆ ತೋರಿಸಿದ ದಾಖಲೆಯಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ದಿಃ 05.11.2020 ರಂದು ನೀಡಿದ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಹೇಳಿಕೆಯನ್ನು ನಿ.ಆರ್.1 ಎಂದು ಗುರುತಿಸಲಾಯಿತು ಸಾಕ್ಷಿಯ ಸಹಿಯನ್ನು ನಿ.ಆರ್.1(ಎ) ಎಂದು ಗುರುತಿಸಲಾಯಿತು. ದಿಃ 05.11.2020 ರಂದು ವಿದ್ಯುತ್ ಪರಿವೀಕ್ಷಕರಿಗೆ ನಾನು ನೀಡಿರುವ ಹೇಳಿಕೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ